ಶ್ರೀ ಎಂ. ವೀರಪ್ಪ ಮೊಯ್ಲಿ.—ತಮಗೆಲ್ಲಾ ಗೊತ್ತಿರುವಹಾಗೆ, ತಂಬಾಕು ಬೆಳೆಗಾರರು ಕಳೆದ ವರ್ಷ ಬಹಳ ಕಷ್ಟದ ಪರಿಸ್ಥಿತಿಗೆ ಒಳಗಾಗುವಂಥ ಪರಿಸ್ಥಿತಿ ಬಂದಿತ್ತು. ಮಾನ್ಯ ಸದಸ್ಯರು ಹೇಳಿದ ಪ್ರಕಾರ ತಂಬಾಕು ಮಂಡಳಿ ಕೇಂದ್ರ ಸರ್ಕಾರದ ಅಧೀನದಲ್ಲಿರತಕ್ಕ ಮಂಡಳಿಯಾಗಿದೆ, ಆದರೂ ಸಹ ಅದು ತೃಪ್ತಿಕರವಾಗಿ ಮತ್ತು ತಂಬಾಕು ಬೆಳೆಗಾರರಿಗೆ ಹೆಚ್ಚಿನ ಪ್ರೋತ್ಸಾಹ ದಾಯಕವಾಗಿ ಕೆಲಸ ಮಾಡ ಬೇಕು ಎಂಬುದು ನಮ್ಮ ಸರ್ಕಾರದ ಅಂಬೋಣ. ಆದರೆ ಬಗ್ಗೆ ಕೂಡ ಇನ್ನು ಹೆಚ್ಚು ಶಕ್ತಿದಾಯಕ ವಾಗಿ ಕೆಲಸ ಮಾಡಬೇಕು ಎನ್ನುವ ಬಗ್ಗೆ ಕೂಡ ನಾವು ಕೇಂದ್ರ ಸರ್ಕಾರದವರೊಡನೆ ಈ ವಿಷಯದ ಬಗ್ಗೆ ಚರ್ಚೆ ನಡೆಸಿ ಇದು ಇನ್ನು ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಮಾಡಬೇಕು ಎನ್ನುವ ಬಗ್ಗೆ ಸಾಕಷ್ಟು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎಂ.ಸಿ, ನಾನಯ್ಯ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸುಮಾರು ಕ್ಷೇತ್ರದಲ್ಲಿ ಈ ತಂಬಾಕಂ ಬೆಳೆಯನ್ನು ಬೆಳೆಯುತ್ತಿದ್ದಾರೆ. ಅದರಲ್ಲಿಯೂ ಬೆಳಗಾಂ. ನಿಪ್ಪಾಣ ಸ್ಥಳಗಳಲ್ಲಿ ಆಲ್ಲದೆ ಮೈಸೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ತಂಬಾಕನ್ನು ಬೆಳೆಯುತ್ತಿ ದ್ದಾರೆ. ಆ ಬೆಳೆಗಾರರಿಗೆ ಬೆಳೆದ ಬೆಳೆಗೆ ನಿಜವಾದ ಬೆಲೆ ಸಿಗುತ್ತಿಲ್ಲ. ಆದರೆ ಕರ್ನಾಟಕ ರಾಜ್ಯದಲ್ಲಿ ತಂಬಾಕು ಕಂಪನಿಗಳು ಯಾರಿದ್ದಾರೆ ಅವರು ಬಳಕೆದಾರರಿಂದ ಕಡಿಮೆ ದರದಲ್ಲಿ ಕೊಂಡುಕೊಂಡು ಹೆಚ್ಚಿನ ದರದಲ್ಲಿ ಹೊರಗಡೆ ಸಾರಾಟ ಮಾಡಿಕೊಂಡು ಹೆಚ್ಚಿನ ಹಣವನ್ನು ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಆದುದರಿಂದ ಸರ್ಕಾರದ ಇದರ ಬಗ್ಗೆ ಮನಾಪಲಿ ಪ್ರಕ್ಯೂರ್‌ಮೆಂಟ್‌ನ್ನು ಹಾಕಿಕೊಂಡು ಬೆಲೆಗಳನ್ನು ಸಮತೋಲನದಲ್ಲಿಟ್ಟುಕೊಳ್ಳಬೇಕೆಂದು ಬೆಳೆಗಾರನಂ ಸರ್ಕಾರಕ್ಕೆ ಅಹವಾಲನ್ನು ಕೊಟ್ಟಿದ್ದಾರೆ, ಅದು ಸರ್ಕಾರದವರ ಗಮನದಲ್ಲಿಯೇ?

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸದಸ್ಯರು ಹೇಳಿದಂಥ ವಿಚಾರದಲ್ಲಿ ಸಾಕಷ್ಟು ಶಕ್ತಿ ಇದೆ ಏತಕ್ಕೆಂದರೆ ಈ ತಂಬಾಕು ಬೆಳೆಗಾರರಿಗೆ ಸಾಕಷ್ಟು ಪ್ರೋತ್ಸಾಹ ಸಿಗುತ್ತಿಲ್ಲವೆಂದು ನನ್ನ ಗಮನಕ್ಕೂ ಕೂಡ ನಾನು ಶಿವಮೊಗ , ಮೈಸೂರು ಜಿಲ್ಲೆಗಳಿಗೆ ಹೋದಾಗ ತಂದಿದ್ದಾರೆ. ಆದುದರಿಂದ ಸರ್ಕಾರ ಇದರ ಬಗ್ಗೆ ಸಾಧ್ಯವಾದ ಎಲ್ಲ ಕ್ರಮವನ್ನು ಕೈಗೊಳ್ಳುವ ಬಗ್ಗೆ ಚಿಂತನೆ ಮಾಡುತ್ತಿದೆ ಮತ್ತು ಮನಾ ಪಲಿ ಪ್ರಕ್ಯೂರ್‌ಮೆಂಟ್ ಬಗ್ಗೆ ಕೊಟ್ಟಂಥ ಸಲಹೆ ನಮ್ಮ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಪರಿ ಶೀಲನೆಯಲ್ಲಿದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳವರು ಮೂಲಕ ಪ್ರಶ್ನೆ ಯನ್ನು ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ಮೊದಲಿನಿಂದಲೂ ಈ ಬೆಳೆಯನ್ನು ಬೆಳೆಯುತ್ತಿ ರುವವರು ಇವತ್ತು ನಾನಾ ಕಾರಣಗಳಿಂದ ತೊಂದರೆಯನ್ನು ಎದುರಿಸುತ್ತಿರಬಹುದು. ಆದರೆ ಈ ತಂಬಾಕು ಬೆಳೆಯನ್ನು ಭೂ ಗುಣಕ್ಕೆ ಅನ್ವಯಿಸಿದ ಜಾಗದಲ್ಲಿ ಬೆಳೆದವರಿಗೆ ಪ್ರೋತ್ಸಾಹ ಕೊಡುತ್ತೇವೆಂದು ಹೇಳಿದ್ದರಿಂದ ಕೆಲವು ರೈತರು ಈ ಬೆಳೆಯನ್ನು ಬೆಳೆದು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅಂಥವರು ಬಹಳ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ. ಇದಕ್ಕೆ ಯಾರು ಜವಾಬ್ದಾರರು ಎಂಬುದೇ ಮೂಲ ಪ್ರಶ್ನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ವಸ್ತುಶ: ಮತ್ತು ಭಾಗಶಃ ಅದು ಸರಿ. ಏತಕ್ಕೆಂದರೆ ಕೆಲವು ಕಡೆ ಬಳಕೆದಾರರಿಗೆ ಪ್ರೋತ್ಸಾಹ ಇಲ್ಲದೆ ಸಾಕಷ್ಟು ತೊಂದರೆಯಾಗಿದೆ. ಅದಕ್ಕೆ ಯಾರನ್ನು ಹೊಣೆ ಮಾಡಬೇಕು ಎಂದು ನಾವು ಅದನ್ನು ನೋಡಬೇಕಾಗಿದೆ.

Grant of Quarry Leases for Black Dyke in Chamarajanagar Taluk

312 SRI M.C. BASAPPA (Chamarajanagar)—Will the Minister for Forest and Mines and Geology be pleased to state.—

(a) the number of licences granted to the (i) private individuals (ii) Mysore Minerals Ltd., for removing black Dyke in Chamarajanagar Taluk:

(b) whether the State Government has stopped issuing such licences.

(c) if so, the reasons for the same:

(d) whether it has come to the notice of the Governme that illegal quarrying of Black Dyke is going on in some qrries in rajanagar Taluk?

SRI G. MADEGOWDA (Minister for Forest and Mines and eology)-

(a) The details of Quarry Leases granted for Black Dyke in Chamarajanagar Taluk are given below.—

(i)	Private individuals	35
(ii)	Mysore Minerals Ltd.	18

(b) Yes, in respect of private parties only.

(c) in view of the amendment to Karnatak Minor Mineral Concession Rules, 1969 issued by Government *vide* Notification No. CI 441 EMO 77 dated 5-9-1979 Quarry Leases for Black Dyke are not being granted to any private individuals.

(d) No.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಮಾನ್ಯ ಮಂತ್ರಿಗಳವರು ೫.೯.೧೯೭೯ರ ನೋಟಿಫಿಕೇಷನ್ ಪ್ರಕಾರವಾಗಿ ಪ್ರೈವೇಟ್ ಪಾರ್ಟೀಸ್‌ಗಳಿಗೆ ಲೀಜ್‌ಗೆ ಕೊಡುವುದನ್ನು ನಿಲ್ಲಿಸಿದ್ದೇವೆಂದು ಹೇಳಿದ್ದಾರೆ. ಆದುದರಿಂದ ಅಲ್ಲಿಂದೀಚೆಗೆ ಲೀಜ್‌ಗೆ ಕೊಡುವುದನ್ನು ನಿಲ್ಲಿಸಿದ್ದಾರೆಯೇ ಸ್ವಾಮಿ?

†ಶ್ರೀ ಜಿ. ಮಾದೇಗೌಡ.—ಲೀಜ್‌ಗೆ ಕೊಡುವುದನ್ನು ನಿಲ್ಲಿಸಬೇಕಂತಲೇ ಆಜ್ಞೆ ಹೊಡಿಸಿದ್ದೇವೆ.

ಶ್ರೀ ಎಂ.ಸಿ. ಬಸಪ್ಪ.—ಆಜ್ಞೆ ಹೊರಡಿಸಿದ್ದೀರಿ, ಆದರೆ ಆದು ಜಾರಿಗೆ ಕೊಟ್ಟಿದ್ದಿಲ್ಲ ಎಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಏತಕ್ಕೆಂದರೆ ೫.೨ ೮೦ ರಲ್ಲಿ ಸರ್ವೆ ನಂಬರ್ ೧೮೪ ಜ್ಯೋತಿ ಗೌಡನ ಪುರ. ಚಾಮರಾಜನಗರ ಜಿಲ್ಲೆಯಲ್ಲಿ ಹೈನಿಂಗ್‌ಗೆ ಲೀಜ್‌ಗೆ ಕೊಟ್ಟಿರುವುದು ಏನಾದರೂ ಸರ್ಕಾರದವರ ಗಮನದಲ್ಲಿದಿಯೇ?

ಶ್ರೀ ಜಿ. ಮಾಡೇಗೌಡ.—ಅದು ನನ್ನ ಗಮನಕ್ಕೆ ಬಂದಿಲ್ಲ, ಬೇಕಾದರೆ ನಿಮಗೆ ತಿಳಿಸಿಕೊಂಡು ಹೇಳುತ್ತೇನೆ,

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಒಂದು ಸಾರಿ ಅಲ್ಲಿ ಮೈನಿಂಗ್ಸ್‌ಗೆ ಲೈಸನ್ಸ್ ಕೊಡಬಾರದು ಎನ್ನತಕ್ಕ ತೀರ್ಮಾನವನ್ನು ತೆಗೆದುಕೊಂಡಿದ್ದರೂ ಕೂಡ ಅನೇಕ ಪಾರ್ಟಿಗಳಿಗೆ ಅದು ರಾಜಕೀಯ ಕಾರಣಕ್ಕೇ ಇರಬಹುದು ಅಥವಾ ಇನ್ನು ಯಾವುದೇ ಒತ್ತಡಕ್ಕೆ ಇರಬಹುದು ನಿಮ್ಮ ಇಲಾಖೆಯವರು ಈ ರೀತಿಯಾಗಿ ಲೈಸನ್ಸ್ ಕೊಡುತ್ತಿದ್ದಾರೆ ಎನ್ನತಕ್ಕದ್ದು ಸರ್ಕಾರದವರ ಗಮನಕ್ಕೆ ಬಂದಿದಿಯೇ

ಶ್ರೀ ಜಿ. ಮಾದೇಗೌಡ.—ಸ್ವಾಮಿ ನನ್ನ ಉತ್ತರದಲ್ಲಿ ಖಚಿತವಾಗಿ ಹೇಳಿದ್ದೇನೆ. ಆದನ್ನು ಖಾಸಗಿಯವರಿಗೆ ಯಾರಿಗೂ ಕೊಟ್ಟಿಲ್ಲ. ಆ ರೀತಿಯಾಗಿ ಕೊಟ್ಟಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಶ್ರೀ ಬಸಪ್ಪನವರು ಯಾವುದೋ ವೈಯಕ್ತಿಕವಾದ ವಿಚಾರದ ಬಗ್ಗೆ ಹೇಳುತ್ತಿದ್ದಾರೆ ಅದನ್ನು ಪರಿಶೀಲನೆ ಮಾಡಿಸಿ ಏನಾದರೂ ಅಧಿಕಾರಿಗಳ ಮಟ್ಟದಲ್ಲಿ ಏನಾದರೂ ಲೈಸನ್ಸ್‌ನ್ನು ಕೊಟ್ಟಿದ್ದರೆ ಅಂಥವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮೇಲೆ ಹೇಳಿದ ನೋಟೀಫಿಕೇಶ್ ಆದ ಮೇಲೆ ಯಾರಿಗೂ ಕೊಟ್ಟಿಲ್ಲ.

ಎಂ.ಪಿ. ಬಸಪ್ಪ.—ಸ್ವಾಮಿ, ನಾನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ, ಏನು ಕ್ರಮ ವನ್ನು ತುಕೊಳ್ಳುತ್ತೀರೋ ತೆಗೆದುಕೊಳ್ಳಿ. ಲೈಸನ್ಸ್‌ನ್ನು ಒಂದಲ್ಲ ಇಬ್ಬರು ಮೂವ್ವರಿಗೆ ಕೊಟ್ಟಿದ್ದಾರೆ. ಸ್ವಾಮಿ ಬಿಳಿಗಿರಿ ರಂಗನ ಬೆಟ್ಟದಲ್ಲಿ ಕಪ್ಪು ಮಣ್ಣನ್ನು ಅಗೆಯುವ ಬಗ್ಗೆ ಈ ನೋಟಿಫಿಕೇಷನ್ ಹೊರಡಿಸಿಕ್ಕಿಂತ ಮುಂಚಿತವಾಗಿ ೧೦ ಅಪ್ಲಿಕೇಷನ್‌ಗಳನ್ನು ಕೊಟ್ಟಿದ್ದಾರೆ. ಆದರೆ ಅದು ಪಾರೆಸ್ಟ್ ಏರಿಯಾ ರುವುದರಿಂದ ಅಲ್ಲಿ ಆನೆ ಮುಂತಾದ ಪ್ರಾಣಿಗಳು ಇವೆ. ಅಲ್ಲಿ ಬ್ಲಾಸ್ಟಿಂಗ್ ಮಾಡುವುದರಿಂದ ಅವಕ್ಕೆ ತೊಂದರೆಯಾಗುತ್ತದೆ. ಈಗ ಒಬ್ಬರು ಪ್ರೈವೇಟ್ ಪಾರ್ಟಿಯವರು ತಮ್ಮ ಪ್ರಭಾವವನ್ನು ಸರ್ಕಾರದ್ಮೇಲೆ ಬೀರಿ ಅಲ್ಲಿ ಮಣ್ಣನ್ನು ಅಗಿಯುವುದಕ್ಕೆ ಲೈಸನ್ಸ್‌ನ್ನು ಕೊಡುವ ಬಗ್ಗೆ ನಿಮ್ಮ ಅಲಾಪೆಯವರು ಶಿಪಾರಸ್ಸು ಮಾಡಿದ್ದಾರೆ ಅದು ಏನಾದರೂ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಮಾದೇಗೌಡ.—ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಕಾನೂನು ಪ್ರಕಾರ ಕೊಡುವುದಕ್ಕುರುವುದಿಲ್ಲ. ಅವರು ಶಿಪಾರಸ್ಸು ಮಾಡಿರಬಹುದು ಆದರೂ ಕೊಡಂವುದಕ್ಕೆ ಬರುವುದಿಲ್ಲ. ನ್ಯ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೆನೆ. ಆಕಸ್ಮಾತ್ ಅಧಿಕಾರಿಗಳ ಮಟ್ಟದಲ್ಲಿ ಅದು ಆಗ್ಬರೂ ಸಹ. ಆ ರೀತಿಯಾಗಿ ಕೊಡುವುದಕ್ಕೆ ಬರುವುದಿಲ್ಲ, ಆ ರೀತಿ ಏನಾದರೂ ಮಾಡಿದ್ದರೆ ಅಂಥವರ್ಮೇಲೆ ಕ್ರಾರ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಸ್. ಬಸಪ್ಪ.—ತಾವು ಹೊರಡಿಸಿರತಕ್ಕ ನೋಟಿಫಿಕೇಶನ್ ಪ್ರಕಾರವಾಗಿ ಲೈಸನ್ಸ್ ಕೊಡುವುದಕ್ಕೆ ಬರುವದಿಲ್ಲ ಎನ್ನುವುದು ನನಗೂ ಅರ್ಥವಾಗುತ್ತದೆ. ಆದರೆ ಬಿ.ಆರ್. ಹಿಲ್ಸ್‌ನಲ್ಲಿ ಪ್ರೈವೇಟ್‌ನವಗೆ ಲೆಸನ್ಸ್ ಕೊಡಬಾರದೆಂದಿದ್ದರೂ ಸಹ ಪ್ರೈವೇಟ್ ಪಾರ್ಟಿಯವರಿಗೆ ಕೊಡಬಹುದೆಂದು ನಿಮ್ಮಇಲಾಖೆಯವರು ಶಿಪಾರಸ್ಸು ಮಾಡಿದ್ದಾರೆಂದು ನಾನು ಸ್ಪೆಸಿಫಿಕ್ ಆಗಿ ಹೇಳುತ್ತಿದ್ದೇನೆ. ದುದರಿಂದ ನರಗ್ಗೆ ಸರ್ಕಾರ ಸ್ಪಷ್ಟವಾಗಿ ಕೊಡುವುದಿಲ್ಲ ಎನ್ನತಕ್ಕಂಥ ಕೆಟಗಾರಿಕಲ್ ಆಶ್ಯೂರೆನ್ಸ್‌ನ್ನು ಕೊಡುತ್ತದೆಯೆ ಸ್ವಾಮಿ?

ಶ್ರೀ ಜಿ.ಮಾದೇಗೌಡ.—ಖಂಡಿತವಾಗಿಯೂ ಕೊಡುವುದಿಲ್ಲ, ನನ್ನ ಮಾತಿನ ಮೇಲೆ ನಂಬಿಕೆ ಇಟ್ಟುಕೊಳ್ಳಿ.

ಅಧ್ಯಕ್ಷ.—ಶ್ರೀ ಸಿ. ರುದ್ರಪ್ಪ ಪ್ರಶ್ನೆ ನಂ. ೪೬—ಮಂತ್ರಿಗಳವರು ಇಲ್ಲ ಆದುರಿಂದ ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

Demnd, Collection and Balance of the Major Municipalities in the Stte.

590. SRI S. SHAFI AHMED (Tumkur).—Will the Minister for Housing and Urban Development be pleased to state :—

what is the demand, collection and balance (DCB) of the major Municipalities in the State for the last one year upto June 1980 ?

SRI DHARAM SINGH NARAYANA SINGH (Minister for Housing and Urban Development).—

The demand, collection and balance (DCB) of the major municipalities in the State upto June 1980 is given below:—